## ದಿಕ್ಕು ತಪ್ಪಿದ ಧಾರಾವಾಹಿಗಳು

**ಕ**ಲರ್ಸ್ ಕನ್ನಡ ವಾಹಿನಿಯಲ್ಲಿ ಬರುತ್ತಿರುವ ಧಾರಾವಾಹಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬಯಸುತ್ತೇನೆ. ನಾನು ಪ್ರಾರಂಭದಿಂದಲೂ ಕನ್ನಡ ವಾಹಿನಿಗಳ ಅಭಿಮಾನಿ. ಆದರೆ ಈಚೆಗೆ ಧಾರಾವಾಹಿಗಳು ದಿಕ್ಕು ತಪ್ಪಿ ಹಲವಾರು ಅಡೆತಡೆಗಳನ್ನು ಸೃಷ್ಟಿಸಿ ಮುಂದುವರಿಯುತ್ತಿರುವುದು ಬಹಳ ಬೇಸರವಾಗಿದೆ. ಕಳೆದ ನಾಲ್ಕು– ಐದು ವರ್ಷಗಳಿಂದ ತೆರೆಯ ಮೇಲೆ ಇರುವ ಧಾರಾವಾಹಿಗಳು ಮುಗಿಯುವ ಲಕ್ಷಣಗಳೇ ಇಲ್ಲ. ನಾವು ಇನ್ನೇನು ಮುಗಿಯುತ್ತದೆ ಎಂದು ಕುತೂಹಲದಿಂದ ಕಾಯುತ್ತಿದ್ದಾಗ ಮತ್ತೊಂದು ತಿರುವು ಪಡೆಯುತ್ತದೆ. ಅದರಲ್ಲೂ ಸಾಗರಿ, ಕುಮುದ, ಚಂದ್ರಿಕಾಳಂತಹವರಿಗೆ ಸೋಲೇ ಇಲ್ಲ. ಇದು ತೀರಾ ಬೇಸರ ತರಿಸುತ್ತಿದೆ. ಹೊಸ ಧಾರಾವಾಹಿಗಳಿಗಾಗಿ ಕಾತರಿಸುವಂತಾಗಿದೆ. ಬೇರೆ ಚಾನೆಲ್‌ಗಳನ್ನು ನೋಡಹೋದರೆ ಅಲ್ಲಿಯೂ ಇಂತಹುದೇ ಅತಿರೇಕದ ಧಾರಾವಾಹಿಗಳು.

ಇನ್ನು ಟಿ.ಆರ್.ಪಿ.ಯನ್ನು ಯಾವ ಮಾನದಂಡದಿಂದ ಅಳೆಯುತ್ತಾರೋ ಗೊತ್ತಿಲ್ಲ. ನಮ್ಮ ಕುತೂಹಲ ತಣಿಸಲು ಹೀಗೇ ಮುಂದುವರೆದರೆ ನಾವು ಈ ಧಾರಾವಾಹಿಗಳನ್ನು ನೋಡುವುದನ್ನೇ ಬಿಡಬೇಕಾಗಬಹುದು. ಇದಕ್ಕಿಂತಾ ರಿಯಾಲಿಟಿ ಶೋಗಳೇ ವಾಸಿ ಎನ್ನುವ ತೀರ್ಮಾನಕ್ಕೆ ಬರಬೇಕಾಗುತ್ತದೆ.

—ಛಾಯಾಕುಮಾರಿ, ಬೆಂಗಳೂರು

## ಮತ್ತೆ ಅದೇ ಗೋಳು

**ಕ**ನ್ನಡ ಕಲರ್ಸ್ ವಾಹಿನಿಯಲ್ಲಿ ಹೊಸ ಘೋಷಣೆ ಆರಂಭವಾಗಿದೆ. ಅದೇನೆಂದರೆ 'ಹೊಸ ತಿರುವುಗಳಲ್ಲಿ ಧಾರಾವಾಹಿಗಳು'ಎಂದು. 'ಅಗ್ನಿಸಾಕ್ಷಿ'ಯಲ್ಲಿ ಹಾವು ಏಣಿ ಆಟ ಆರಂಭವಾಗಿದೆ ಎಂದರೆ ತಪ್ಪಾಗಲಾರದು. ಖಳನಾಯಕ/ನಾಯಕಿಯರಿಗೆ ಶಿಕ್ಷೆ ಆಗಿ ಉತ್ತಮ ರೀತಿಯಲ್ಲಿ ಕಥೆ ಮುಕ್ತಾಯವಾಗುತ್ತದೆ ಎಂದುಕೊಂಡಿದ್ದರೆ, ಅದು ಇನ್ಯಾವುದೊ ದಾರಿಯಲ್ಲಿ ಸಾಗುವಂತಿದೆ. ಇನ್ನು 'ರಾಧಾ–ರಮಣ'ದಲ್ಲಿ, ರಮಣನಿಗೆ ಅವನ ತಂಗಿ ಸಿಕ್ಕಿಬಿಟ್ಟಳು ಎಂಬ ಸಂತಸದಲ್ಲಿ ವೀಕ್ಷಕರಿದ್ದರೆ, ಅಲ್ಲಿ ಧುತ್ತೆಂದು ಖಳನಾಯಕಿ ಸಿತಾರ ವಕ್ರಿಸಿಕೊಂಡಿದ್ದಾಳೆ.

ವಾರದ ಪತ್ರ

## ಬದಲಾಗದ ಸ್ವಘೋಷಿತ ಸೆಲೆಬ್ರಿಟಿಗಳು

**ಮೊ**ದಲ ನಾಲ್ಕು ಬಿಗ್‌ಬಾಸ್ ಶೋಗಳಂತೆ ಐದನೆಯದೂ ಬದಲಾವಣೆಯಿಲ್ಲದೆ 'ಅದೇ ಬಾಸು, ಅದೇ ಟಾಸ್ಕು'ಗಳೊಂದಿಗೆ ಮುಕ್ತಾಯವಾಗಿದೆ. ಮುಂದಿನ ಬಿಗ್ ಬಾಸ್ ಆರನೇ ಸೀಸನ್ ಶೋನಲ್ಲೂ ಹಾಲು ಬಚ್ಚಿಡುವುದು, ಪ್ರೈಮರಿ ಸ್ಕೂಲು ಸ್ಟೂಡೆಂಟ್ ಟಾಸ್ಕು, ರಾಜಕಾರಣಿ ಟಾಸ್ಕು, ಕಬಡ್ಡಿ, ಝೂ, ಹೋಟೆಲ್, ಹುಚ್ಚಾಸ್ಪತ್ರೆ ಟಾಸ್ಕು ಮರುಕಳಿಸಬಹುದು. ಬಾಸ್‌ಗೂ ಇವೆಲ್ಲ ಬಾಯಿಪಾಠ ಆಗಿವೆ.

ಐದರ ಸ್ವಘೋಷಿತ ಸೆಲೆಬ್ರಿಟಿಗಳನ್ನು ಅವರವರ ಶಕ್ತ್ಯಾನುಸಾರ ಹಲವಾರು ವಾರಗಳ ಕಾಲ ಮನೆಯೊಳಗೆ ಇಟ್ಟರೂ ಅವರ 'ಹುಟ್ಟುಗುಣಗಳು' ಬದಲಾಗಲೇ ಇಲ್ಲ. ಆದರೂ ಕಂಗ್ಲಿಷ್ ಮಾತಾಡುತ್ತ, ನೇರ, ದಿಟ್ಟ, ನಡೆ–ನುಡಿಗಳಿಂದ ಮನಗೆದ್ದ ನಿವೇದಿತಾ ಗೌಡ  ಬಿಗ್‌ಬಾಸ್‌ನ ಮುಖ್ಯ ಆಕರ್ಷಣೆಯಾಗಿದ್ದರು ಎಂಬುದರಲ್ಲಿ ಸಂದೇಹವೇ ಇಲ್ಲ.

-ಇಂದು, ತಿಪಟೂರು

ಯಾವುದೇ ಧಾರಾವಾಹಿಯಲ್ಲಿ ಪುರುಷರು 'ನಾಲಾಯಕ್ಕರು' ಎಂಬಂತೆ ವರ್ತಿಸುತ್ತಿದ್ದಾರೆ. ಖಳನಾಯಕಿಯರು ಅಟ್ಟಹಾಸದಿಂದ ಮೆರೆಯುತ್ತಿದ್ದಾರೆ ಎಂದರೆ ತಪ್ಪಾಗಲಾರದು. 'ಪದ್ಮಾವತಿ' ಧಾರಾವಾಹಿಯಲ್ಲಿ ಒಬ್ಬಳು ಮುದುಕಿ ಮನೆಯಲ್ಲಿ ಮಾಟ–ಮಂತ್ರ ಮಾಡುತ್ತಿರುವ ವಿಷಯ ಮನೆಯ ಹಿರಿಯರಿಗೆ ತಿಳಿಯುವುದಿಲ್ಲ ಎಂಬುದು ಮಹಾ ಮೂರ್ಖತನ. ಗೊತ್ತಿದ್ದವರು ಹೇಳುವುದೂ ಇಲ್ಲ. ಒಟ್ಟಿನಲ್ಲಿ ಉತ್ತಮ ರೀತಿಯಲ್ಲಿ ಧಾರಾವಾಹಿಗಳು ಮುಕ್ತಾಯಗೊಳ್ಳುತ್ತವೆ ಎಂದು ನಂಬಿದ್ದ ವೀಕ್ಷಕ ನಿಜಕ್ಕೂ ಹೈರಾಣಾಗಿದ್ದಾನೆ ಎಂದರೆ ತಪ್ಪಾಗಲಾರದು. ಇದಕ್ಕೆ ಅಂಕುಶ ಹಾಕುವವರು ಇಲ್ಲವೆ? ದಯವಿಟ್ಟು ಹಳೆಯ ಧಾರಾವಾಹಿಗಳಿಗೆ ಮುಕ್ತಿ ಕೊಟ್ಟು ಹೊಸ ಧಾರಾವಾಹಿಗಳು ಆರಂಭವಾಗಲಿ.

—ಎನ್.ಎಸ್. ಚಂದ್ರಶೇಖರ್; ಶರ್ಮಿಷ್ಟ ರಘು;
ಎಂ.ಆರ್.ಕಮಲಮ್ಮ, ಬೆಂಗಳೂರು

## ಕ್ರೈಮ್ ಪ್ರಸಾರಕ್ಕೆ ಕಡಿವಾಣವಿರಲಿ!

ಕನ್ನಡದ ಎಲ್ಲಾ ನ್ಯೂಸ್ ಚಾನೆಲ್‌ಗಳಲ್ಲಿ ಕ್ರೈಮ್ ನ್ಯೂಸ್‌ಗಳನ್ನು ದಿನಪೂರ್ತಿ ತೋರಿಸುವುದು ವೀಕ್ಷಕರಿಗೆ ಕಿರಿಕಿರಿ ತರುವಂತಹದ್ದು. ಹಿರಿಯರ ಜೊತೆಗೆ ಮಕ್ಕಳೂ ಸಹ ನೋಡುತ್ತಿರುತ್ತಾರೆ. ಹೃದಯದ ಕಾಯಿಲೆ ಇರುವಂತಹ ವಯಸ್ಕರು ಇರುತ್ತಾರೆ. ಇಂತಹವರು ಯಾವುದೇ ಕೊಲೆಯ ಲೈವ್ ದೃಶ್ಯವನ್ನು ನೋಡಿದಾಗ ಅವರ ಮನಸ್ಸಿನ ಮೇಲೆ ಏನು ಪರಿಣಾಮವಾಗಬಹುದು ಎಂಬ ವಿಚಾರವನ್ನು ನ್ಯೂಸ್ ಚಾನೆಲ್‌ನವರು ತಿಳಿದುಕೊಳ್ಳಬೇಕಾಗಿದೆ. ಇಂತಹ ದೃಶ್ಯಗಳನ್ನು ಒಮ್ಮೆ ತೋರಿಸಿದರೆ ಅಷ್ಟೇನೂ ಪರಿಣಾಮ ಬೀರುವುದಿಲ್ಲ. ಅದನ್ನೇ ಪದೆ ಪದೆ ತೋರಿಸಿದರೆ ಹೇಗೆ? ಆದ್ದರಿಂದ ಕ್ರೈಂ ದೃಶ್ಯಗಳ ಪ್ರಸಾರದ ಬಗ್ಗೆ ಗಮನವಿರಲಿ.

—ವಿ. ಗಜಾನನ ಹುಲೇಕಲ್, ಶಿರಸಿ

## ಸಹ ಶಿಕ್ಷಣ ಮತ್ತು ಧಾರಾವಾಹಿಗಳು

ಇತ್ತೀಚೆಗೆ ಎಲ್ಲಾ ನಗರಗಳಲ್ಲಿಯೂ ಹುಡುಗಿಯರಿಗಾಗಿಯೇ ಪ್ರತ್ಯೇಕ ಕಾಲೇಜುಗಳು ತೆರೆಯಲ್ಪಟ್ಟಿರುವುದನ್ನು ಕಾಣುತ್ತೇವೆ. ಆದರೆ ನಮ್ಮ ಅನೇಕ ಧಾರಾವಾಹಿಗಳ ನಿರ್ದೇಶಕರಿಗೆ ಹುಡುಗ ಮತ್ತು ಹುಡುಗಿಯರು ಜೊತೆಯಾಗಿ ಓದುವ ಕಾಲೇಜುಗಳೇ ಅಂದರೆ ಸಹ ಶಿಕ್ಷಣ (ಕೋ ಎಜುಕೇಷನ್) ನಡೆಸುವ ಕಾಲೇಜುಗಳೇ ಹೆಚ್ಚು ಜನಪ್ರಿಯವೆನಿಸುತ್ತದೆ.

'ಕುಲವಧು'ವಿನಲ್ಲಿ ವಚನಾಳ ವಿವಾಹದ ಮೊದಲ ಬಾಯ್‌ಫ್ರೆಂಡ್ ಕಾಲೇಜಿನಲ್ಲಿ ಪರಿಚಿತನಾದವನು. ಅಮ್ಮನ ಅತಿ ಮುದ್ದಿನಿಂದ ಬೆಳೆದಿರುವ 'ಕಿನ್ನರಿ'ಯಲ್ಲಿನ ಕಾಯಾಳಿಗೂ ಕಾಲೇಜಿನಲ್ಲಿ ಬಾಯ್‌ಫ್ರೆಂಡ್ ಸಿಕ್ಕ. 'ಮನೆ ದೇವರು' ವಿನಲ್ಲಿ ಕಾಲೇಜಿಗೆ ಕಾಲಿಡದಂತೆ ನಾಲ್ಕು ಗೋಡೆಗಳ ಮಧ್ಯೆ ಕೂಡಿ ಹಾಕಿಸಿಕೊಂಡಿದ್ದ ಮನೆಯ ಯಜಮಾನನ ತಮ್ಮನ ಮಗಳಿಗೂ ಕದ್ದು ಮುಚ್ಚಿ ಕಾಲೇಜಿಗೆ ಸೇರಿದ ಮೊದಲ ದಿನವೇ ಬಾಯ್ ಫ್ರೆಂಡ್ ಸಿಕ್ಕಿ ಮಾಮೂಲಿನಂತೆ ನೋಟ್ಸ್ ಕೇಳುವುದು ಇತ್ಯಾದಿ.. ಯಾವುದೇ ವಿಷಯದ ನೋಟ್ಸ್ ಅಂಗಡಿಗಳಲ್ಲಿ ಸಿಗುತ್ತದೆ ಎಂದು ಯೋಚಿಸಲಾರದಷ್ಟು ನಿರ್ದೇಶಕರು ಅಮಾಯಕರೆ? ಅಥವಾ ಅವರ ದೃಷ್ಟಿಯಲ್ಲಿ ಹುಡುಗಿಯರ ಕಾಲೇಜಿಗೆ ಬರವೇ?

—ಶಾಂತಾ ನಾಗರಾಜ್ ಕೆ., ಬೆಂಗಳೂರು

## ಏನಿದು ವರ್ತನೆ?

'ವಿದ್ಯಾ ವಿನಾಯಕ'ದ ನಾಯಕ ಪಾತ್ರಧಾರಿ ಆಕಾಶದಿಂದ ಉದುರಿದಂತೆ ಆಡುವುದು ಸರಿಯಲ್ಲ.  ವಿದ್ಯಾಳನ್ನು ಹುಡುಕಲು ಹಳ್ಳಿಗೆ ಹೋದಾಗ ಮೂಗು ಮುಚ್ಚಿಕೊಂಡು ಓಡಾಡಿದ್ದು, ದೂಳು ಅಂತ ಸೀನಿದ್ದು, ಸಿಟಿಯಲ್ಲಿ ವಾಹನಗಳ ಕಾರ್ಬನ್, ದೂಳಿಗೆ ಒಗ್ಗಿಕೊಂಡವನು ಹಳ್ಳಿಯ ಪ್ರಕೃತಿ ಸೌಂದರ್ಯ, ಶುದ್ಧ ಗಾಳಿ ಹಸಿರುವಲಯಕ್ಕೆ ಅರಳಬೇಕು.

ದನಕರು ಕಂಡು ಮುಖ ಕಿವುಚುವುದು. ಅದೇ ಹಸುಗಳಿಂದಲೇ ಅಲ್ಲವೇ ಹಾಲು ಕುಡಿಯುವುದು. ಬ್ಯಾಕ್ಟೀರಿಯಾ ಕೊಳೆ ಅಂತ ತಾನೇ ಒಂದು ಬ್ಯಾಕ್ಟೀರಿಯಾ ಆಗಿದ್ದಾನೆ. ಧಾರಾವಾಹಿ ಈ ವರ್ತನೆಯಿಂದ ಜನರಿಗೆ ಯಾವ ಸಂದೇಶ  ನೀಡುತ್ತಿದೆಯೋ ತಿಳಿಯುತ್ತಿಲ್ಲ.

—ರತ್ನಾ ಅಶೋಕ ಗೊರವರ, ಧಾರವಾಡ